
# ಸುಳ್ಳು ಮಾಡುವ ಹೆಂಗಸರು



ನೀನು ಬರಲಿ ಎಂದೇ
ನಾನು ಬಾಗಿಲ ಸಂದಿಗೆ ಕೈ ಕೊಟ್ಟೆ
ಆ ಮೊದಲಿನೆರಡು ನಿಶ್ಶಬ್ದ ಸನ್ನೆಗಳ ನೀನು
ಕಂಡೂ ಕಾಣದಂತಿದ್ದೆ
ಮೂರನೆಯದು ಸಶಬ್ದವಾದುದರ
ಫಲ; ಎಲ್ಲರೂ ಬಂದುಬಿಟ್ಟರು
ನಿನ್ನನ್ನು ಹೊರತು

ದೊಡ್ಡಕ್ಕ ಅಂದಳು – ಸದ್ಯ ರಕ್ತ ಬಂದಿಲ್ಲ
ಚಿಕ್ಕವಳೆಂದಳು – ಅದೇ ಮೇಲು ಕಣೆ
ಇದು ಮೂಗುಗಾಯ
ಮಾಯುವುದು ನಿಧಾನ
ವರ್ಷಗಳಾದರೂ
ಮುಟ್ಟಿದಾಗೆಲ್ಲ ನೋವೇ

2
ಈಗ ನನ್ನ ಮೊದಲ ಸನ್ನೆಗೇ ಬರುತ್ತಾರೆ
ಒಬ್ಬರಿಲ್ಲಿನ್ನೊಬ್ಬರು – ತುಂಬಿದ ಮನೆ, ತುಂಬ ಜನ
ವಿಚಾರಿಸುತ್ತಾರೆ – ಏನಾಯಿತೇನಾಯಿತು?



ಇಪ್ಪತ್ತು ವರ್ಷಗಳಾದುವು
ಮುಟ್ಟಿದಾಗ ನೋವಿಲ್ಲ
ಚಿಕ್ಕಕ್ಕ ಹೇಳಿದ್ದು ಸುಳ್ಳಲ್ಲ
ನಾನದನ್ನು ಸುಳ್ಳು ಮಾಡಿದೆ
ಎನ್ನುವುದು ಸತ್ಯ

ಹೀಗೇ
ಕಟುಸತ್ಯಗಳನ್ನು ಕಷಾಯಗಳೊಡನೆ
ಕುದಿಸೀ ಕುದಿಸೀ ಸುಳ್ಳು ಮಾಡುವ ಹೆಂಗಸರು
ಇರುವುದರಿಂದಲೇ ಇದೆ
'ಮನೆ'ಯೆಂಬುದು.



ಲಲಿತಾ ಸಿದ್ಧಬಸವಯ್ಯ
ಕಲೆ: ಜಬೀವುಲ್ಲಾ ಎಂ. ಅಸದ್